ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/11/ಇಸಿಎಸ್(2)/2019-20

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 13-07-2020

## ಅಧಿಕೃತ ಜ್ಞಾಪನ

ವಿಷಯ: COVID-19 Pandemic ಹಿನ್ನೆಲೆಯಲ್ಲಿ 2019-20 ನೇ ಸಾಲಿನ 06 ನೇ ಸೆಮಿಸ್ಟರ್ ಡಿಪ್ಲೊಮಾ ಥಿಯರಿ ಪರೀಕ್ಷೆಗಳು, ಎಲ್ಲಾ ಸೆಮಿಸ್ಟರ್‌ಗಳ ಬ್ಯಾಕ್‌ಲಾಗ್ ಪರೀಕ್ಷೆಗಳನ್ನು ನಡೆಸುವ ಹಾಗೂ 02 ಮತ್ತು 04 ನೇ ಸೆಮಿಸ್ಟರ್ ವಿದ್ಯಾರ್ಥಿಗಳ ತೇರ್ಗಡೆ ಬಗ್ಗೆ ಮಾನದಂಡಗಳು.

ಉಲ್ಲೇಖ: ಏಕಕಡತ ಸಂಖ್ಯೆ: ಬಿಟಿಇ/11/ಇಸಿಎಸ್(2)/2019-20, ದಿನಾಂಕ: 08-07-2020

*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, COVID-19 Pandemic ಹಿನ್ನೆಲೆಯಲ್ಲಿ 2019-20 ನೇ ಸಾಲಿನ 06 ನೇ ಸೆಮಿಸ್ಟರ್ ಡಿಪ್ಲೊಮಾ ಪರೀಕ್ಷೆಗಳನ್ನು ಮತ್ತು ಎಲ್ಲಾ ಸೆಮಿಸ್ಟರ್‌ಗಳ ಬ್ಯಾಕ್‌ಲಾಗ್ ಪರೀಕ್ಷೆಗಳನ್ನು ದಿನಾಂಕ: 07.09.2020 ರಿಂದ 28.09.2020 ರವರೆಗೆ ನಡೆಸಲು ಹಾಗೂ 02 & 04 ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು ಮುಂದಿನ 03ನೆಯ ಮತ್ತು 05ನೆಯ ಸೆಮಿಸ್ಟರ್‌ಗಳಿಗೆ ತೇರ್ಗಡೆಗೊಳಿಸುವ ಸಂಬಂಧ, ಮಾನದಂಡಗಳನ್ನು ರೂಪಿಸಿ, ಸರ್ಕಾರವು ಉಲ್ಲೇಖ (1) ರಲ್ಲಿ ಅನುಮತಿಸಿದೆ.

1. ದಿನಾಂಕ: 15.07.2020 ರಿಂದ 05.08.2020 ರವರೆಗೆ ನಿಗದಿಪಡಿಸಿ, ನಂತರ ಮುಂದೂಡಲಾಗಿದ್ದ ಡಿಪ್ಲೊಮಾ ಸೆಮಿಸ್ಟರ್ ಪರೀಕ್ಷೆಗಳನ್ನು ದಿನಾಂಕ: 07.09.2020 ರಿಂದ 28.09.2020 ರವರೆಗೆ ನಡೆಸಲಾಗುವುದು.
2. 06 ನೇ ಅಂತಿಮ ಸೆಮಿಸ್ಟರ್‌ನ ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಬರೆಯುವುದು.
3. ಯಾವುದೇ ವಿದ್ಯಾರ್ಥಿಯು ಯಾವುದೇ ಸೆಮಿಸ್ಟರ್‌ನಲ್ಲಿ ಥಿಯರಿ ಪರೀಕ್ಷೆಯ ವಿಷಯಗಳಲ್ಲಿ ಅನುತ್ತೀರ್ಣರಾಗಿ (Subject) ಬಾಕಿ ಉಳಿಸಿಕೊಂಡಿದ್ದಲ್ಲಿ (Backlog Subject) ಅಂತಹ ವಿದ್ಯಾರ್ಥಿಗಳು ಸಹ ಪರೀಕ್ಷೆಯನ್ನು ಬರೆಯುವುದು.
4. 2019-20 ನೇ ಸಾಲಿನಲ್ಲಿ ಡಿಪ್ಲೊಮಾ 02 ಮತ್ತು 04 ನೇ ಸೆಮಿಸ್ಟರ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ 02 ಮತ್ತು 04 ನೆಯ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸದೆ ಮುಂದಿನ ಸೆಮಿಸ್ಟರ್‌ಗೆ ಈ ಕೆಳಕಂಡ ನಿಯಮಗಳನ್ನು ಪಾಲಿಸಿ ತೇರ್ಗಡೆಗೊಳಿಸಲಾಗುವುದು.
   - 02 / 04 ನೇ ಸೆಮಿಸ್ಟರ್‌ನ ಥಿಯರಿ ವಿಷಯಗಳಿಗೆ (Theory Subject) ಗರಿಷ್ಠ 100 ಅಂಕಗಳಿಗೆ ಪ್ರತಿಯೊಬ್ಬ ವಿದ್ಯಾರ್ಥಿಗೆ ನೀಡಬಹುದಾದ ಅಂಕಗಳನ್ನು ಈ ರೀತಿ ನಿಗದಿಪಡಿಸಲಾಗಿದೆ.
     a) 50% of Average of Passed Subjects of Previous Semester

        (ಉದಾಹರಣೆಗೆ 2019-20 ನೇ ಸಾಲಿನಲ್ಲಿ 02/04 ನೇ ಸೆಮಿಸ್ಟರ್ ವಿದ್ಯಾರ್ಥಿಯು 01/03 ನೇ ಸೆಮಿಸ್ಟರ್‌ನಲ್ಲಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆಹೊಂದಿ ಅವನ ಫಲಿತಾಂಶವು ಶೇ 76ರಷ್ಟು ಎಂದು ಭಾವಿಸುವುದಾದರೆ, 02ನೇ/04ನೇ ಸೆಮಿಸ್ಟರ್‌ಗೆ ಅಂತಹ ವಿದ್ಯಾರ್ಥಿಯು 50 ಅಂಕಗಳಿಗೆ 38 ಅಂಕಗಳನ್ನು ಹೊಂದಲು ಅರ್ಹನಿರುತ್ತಾನೆ)

        (ವಿದ್ಯಾರ್ಥಿಯು Previous ಸೆಮಿಸ್ಟರ್‌ನಲ್ಲಿ ಕೆಲವೊಂದು ವಿಷಯ/ಗಳಲ್ಲಿ ಅನುತ್ತೀರ್ಣನಾಗಿದ್ದರೂ ಸಹ, ತೇರ್ಗಡೆಯಾಗಿರುವ ವಿಷಯಗಳನ್ನು ಮಾತ್ರ ಪರಿಗಣಿಸಿ, ಅವುಗಳ ಸರಾಸರಿ ಅಂಕಗಳನ್ನು ಗಣನೆಗೆ ತೆಗೆದುಕೊಂಡು ಅಂಕಗಳನ್ನು ನಿಗದಿಪಡಿಸಿ ಮುಂದಿನ ಸೆಮಿಸ್ಟರ್‌ಗೆ ತೇರ್ಗಡೆ ಹೊಂದುವ ಬಗ್ಗೆ ನಿರ್ಧರಿಸಲಾಗುವುದು)

b) 50% of Continuous Internal Evaluation

(ಉದಾಹರಣೆಗೆ 2019-20 ನೇ ಸಾಲಿನಲ್ಲಿ ಒಬ್ಬ ವಿದ್ಯಾರ್ಥಿಯು 02/04 ನೇ ಸೆಮಿಸ್ಟರ್‌ನಲ್ಲಿ ಥಿಯರಿ ಪರೀಕ್ಷೆಗಳ Internal Assessment ನಲ್ಲಿ 25 ಅಂಕಗಳಿಗೆ 18 ಅಂಕಗಳನ್ನು ಪಡೆದಿದ್ದಲ್ಲಿ ಸದರಿ ವಿದ್ಯಾರ್ಥಿಗೆ 50 ಅಂಕಗಳಿಗೆ 36 ಅಂಕಗಳು ಎಂದು ಪರಿಗಣಿಸತಕ್ಕದ್ದು)

ಮೇಲ್ಕಂಡ ನಿಯಮಗಳ ಅನುಸಾರ ವಿದ್ಯಾರ್ಥಿಯು ಪಡೆಯಬಹುದಾದ ಗರಿಷ್ಠ 100 ಅಂಕಗಳಿಗೆ ಪಡೆಯಬಹುದಾದ ಅಂಕಗಳು (a+b)

| | | |
|---|---|---|
| a) | Previous Semester ಫಲಿತಾಂದ ಆಧಾರದ ಮೇಲೆ | – 38 |
| b) | Continuous Internal Evaluation(CIE) ಅನ್ವಯ | – 36 |
| | ಗರಿಷ್ಠ 100 ಅಂಕಗಳಿಗೆ ದೂರೆಯುವ ಅಂಕಗಳು | – 74 |

5. ಸಂಜೆ ಪಾಲಿಟೆಕ್ನಿಕ್‌ನ 2019-20 ನೇ ಸಾಲಿನ ಮೊದಲನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ, 100% CIE ಯನ್ನ ಪರಿಗಣಿಸಿ, ಪ್ರತಿಯೊಂದು ವಿಷಯಕ್ಕೆ ಅಂಕಗಳನ್ನ ನೀಡಿ ಫಲಿತಾಂಶ ಪರಿಗಣಿಸಿ 02 ನೇ ಸೆಮಿಸ್ಟರ್‌ಗೆ ತೇರ್ಗಡೆ ನೀಡುವುದು. 03 ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಫಲಿತಾಂಶವನ್ನು 50% CIE ಮತ್ತು 50% Previous ಪರೀಕ್ಷೆಯ ಆಧಾರದ ಮೇಲೆ ನಿಗದಿಪಡಿಸಿ, 04ನೇ ಸೆಮಿಸ್ಟರ್ ತರಗತಿಗಳಿಗೆ ತೇರ್ಗಡೆ ನೀಡುವುದು. 2019-20 ನೇ ಸಾಲಿನ ಪಾಲಿಟೆಕ್ನಿಕ್‌ನ 05 ನೇ ಸೆಮಿಸ್ಟರ್ ವಿದ್ಯಾರ್ಥಿಗಳು ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಪರೀಕ್ಷೆಯನ್ನು ಬರೆಯುವುದು.
6. ಪೋಸ್ಟ್ ಡಿಪ್ಲೊಮಾ ಇನ್ ಇಂಡಸ್ಟ್ರಿಯಲ್ ಸೇಫ್ಟಿ ವಿದ್ಯಾರ್ಥಿಗಳು 02 ನೇ ಸೆಮಿಸ್ಟರ್ (ಅಂತಿಮ ಸೆಮಿಸ್ಟರ್) ಪರೀಕ್ಷೆಯನ್ನು ನಿಗದಿಪಡಿಸಲಾಗುವ ವೇಳಾಪಟ್ಟಿಯಂತೆ ಬರೆಯುವುದು. ಬ್ಯಾಕ್‌ಲಾಗ್ ಥಿಯರಿ ವಿಷಯಗಳಿಗೆ (Backlog Theory) ಸಹ ಪರೀಕ್ಷೆ ಬರೆಯುವುದು.
7. Ministry of Home Affairs ತರಗತಿಗಳನ್ನು ನಡೆಸಲು ಅನುಮತಿ ನೀಡಿದ್ದಲ್ಲಿ, ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ COVID-19 Pandemic ಮುನ್ನಚ್ಚರಿಕಾ ಕ್ರಮಗಳನ್ನು ಕೈಗೊಂಡು ಅವಶ್ಯಕತೆಗನುಗುಣವಾಗಿ ತರಗತಿಗಳನ್ನು ನಡೆಸಿ ವಿದ್ಯಾರ್ಥಿಗಳಿಗೆ 03 ನೇ IA / Improvement IA ಕಿರು ಪರೀಕ್ಷೆಗಳನ್ನು ನೀಡಿ ಚಾಲ್ತಿಯಲ್ಲಿರುವ ನಿಯಮಗಳನ್ವಯ ವಿದ್ಯಾರ್ಥಿಗಳ IA ಅಂಕಗಳನ್ನು ನಿಗದಿಪಡಿಸಲು ತಿಳಿಸಲಾಗಿದೆ.

   03 ನೇ IA / Improvement IA ಮಾಡಲು ಸ್ಥಳೀಯ ಪರಿಸ್ಥಿತಿ ಅನುವು ಮಾಡಿಕೊಡದಿದ್ದಲ್ಲಿ IA-1 ಮತ್ತು IA-2 ಸರಾಸರಿಯನ್ನು ಪರಿಗಣಿಸುವುದು.
8. COVID-19 Pandemic ಹಿನ್ನಲೆಯಲ್ಲಿ 2019-20 ನೇ ಸಾಲಿನ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುವಂತೆ ಈಗ ಚಾಲ್ತಿಯಲ್ಲಿರುವ 04 ವಿಷಯಗಳ ಬದಲಾಗಿ Full Carryover ನೀಡಲಾಗಿದೆ.
9. COVID-19 Pandemic ಹಿನ್ನಲೆಯಲ್ಲಿ 2019-20 ನೇ ಸಾಲಿಗೆ ಮಾತ್ರ ಅನ್ವಯಿಸುವಂತೆ ರಾಜ್ಯದ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಲಿಖಿತ ಮೂಲಕವಾಗಿ ಅಪೇಕ್ಷೆಯನ್ನು ಸಲ್ಲಿಸಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ತಮಗೆ ಸಮೀಪದಲ್ಲಿರುವ ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಪರೀಕ್ಷೆಯನ್ನು ಬರೆಯಲು ಅನುಮತಿ ನೀಡಲಾಗಿದೆ.
10. COVID-19 Pandemic ಹಿನ್ನಲೆಯಲ್ಲಿ 2019-20 ನೇ ಸಾಲಿನ ಪ್ರಾಯೋಗಿಕ ಪರೀಕ್ಷೆಗಳಿಗೆ ಮಾತ್ರ ಅನ್ವಯಿಸುವಂತೆ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳಿಂದ ವಿನಾಯಿತಿಯನ್ನು ನೀಡಲಾಗಿದೆ. ವಿದ್ಯಾರ್ಥಿಗಳು ಪ್ರಾಯೋಗಿಕ ತರಗತಿಗಳಲ್ಲಿ ಪಡೆದಿರುವ ಆಂತರಿಕ ಅಂಕಗಳ (IA) ಆಧಾರದ ಮೇಲೆ ಪ್ರಾಯೋಗಿಕ ಪರೀಕ್ಷೆಗಳ ತೇರ್ಗಡೆಯನ್ನು ಪರಿಗಣಿಸಲಾಗುವುದು.
11. ದಿನಾಂಕ: 07.09.2020 ರಿಂದ 28.09.2020 ರವರೆಗೆ ನಿಗದಿಪಡಿಸಲಾಗಿರುವ ತಾತ್ಕಾಲಿಕ ವಿವರವಾದ ಪರೀಕ್ಷಾ ವೇಳಾಪಟ್ಟಿಯನ್ನು ಬಿ.ಟಿ.ಇ ಲಿಂಕ್ಸ್ ವೆಬ್‌ಪೋರ್ಟಲ್ ಮತ್ತು www.dtek.karnataka.gov.in ಇಲಾಖಾ ವೆಬ್‌ಸೈಟ್‌ನಲ್ಲಿ ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು.

12. 2019-20 ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ 06 ನೇ ಸೆಮಿಸ್ಟರ್‌ನ ಯಾವುದೇ ವಿದ್ಯಾರ್ಥಿಯು ಕೈಮೀರಿದ ಪರಿಸ್ಥಿತಿಯಲ್ಲಿ ಪರೀಕ್ಷೆಗೆ ಗೈರುಹಾಜರಾದರೆ ಅಂತಹ ವಿದ್ಯಾರ್ಥಿಯು ಈ ಪರೀಕ್ಷೆಯ ನಂತರದ ಮುಂದಿನ ಪರೀಕ್ಷೆಯಲ್ಲಿ ಹಾಜಗಾದರೇ ಮಾತ್ರ ಅಂತಹ ವಿದ್ಯಾರ್ಥಿ/ವಿದ್ಯಾರ್ಥಿಗಳು ಪರೀಕ್ಷೆಗೆ ಕೂರುವುದನ್ನು ಮೊದಲನೇ ಪ್ರಯತ್ನ (First Attempt) ಎಂದು ಪರಿಗಣಿಸಲಾಗುವುದು.
13. 2020-21 ನೇ ಸಾಲಿನ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ಈ ಕೆಳಕಂಡ ಕೋಷ್ಟಕದಂತೆ ನಿಗದಿಪಡಿಸಲಾಗಿದೆ.

**ಕೋಷ್ಟಕ**

| ಕ್ರ. ಸಂ | ತಾತ್ಕಾಲಿಕ ಶೈಕ್ಷಣಿಕ ಕಾರ್ಯಕ್ರಮ | ದಿನಾಂಕ |
|---|---|---|
| 1 | 01 ನೇ ಸೆಮಿಸ್ಟರ್‌ನ ತರಗತಿಗಳ ಪ್ರಾರಂಭ ಮತ್ತು ಮುಕ್ತಾಯ | ಪ್ರಾರಂಭ : 01.10.2020<br>ಮುಕ್ತಾಯ : 23.01.2021 |
| 2 | 03 ನೇ ಮತ್ತು 05 ನೇ ಸೆಮಿಸ್ಟರ್‌ನ ತರಗತಿಗಳ ಪ್ರಾರಂಭ ಮತ್ತು ಮುಕ್ತಾಯ | ಪ್ರಾರಂಭ : 29.09.2020<br>ಮುಕ್ತಾಯ : 23.01.2021 |
| 3 | 01,03,05 ನೇ ಸೆಮಿಸ್ಟರ್‌ನ ಪ್ರಾಯೋಗಿಕ ಪರೀಕ್ಷೆಗಳು | ಪ್ರಾರಂಭ : 28.01.2021<br>ಮುಕ್ತಾಯ : 08.02.2021 |
| 4 | 01,03,05 ನೇ ಸೆಮಿಸ್ಟರ್ ಥಿಯರಿ ಪರೀಕ್ಷೆಗಳು | ಪ್ರಾರಂಭ : 11.02.2021<br>ಮುಕ್ತಾಯ : 03.03.2021 |
| 5 | 02,04,06 ನೇ ಸೆಮಿಸ್ಟರ್ ಪ್ರಾರಂಭ ಹಾಗೂ ಮುಕ್ತಾಯ | ಪ್ರಾರಂಭ : 08.03.2021<br>ಮುಕ್ತಾಯ : 26.06.2021 |
| 6 | 02,04,06 ನೇ ಸೆಮಿಸ್ಟರ್‌ನ ಪ್ರಾಯೋಗಿಕ ಪರೀಕ್ಷೆಗಳು | ಪ್ರಾರಂಭ : 01.07.2021<br>ಮುಕ್ತಾಯ : 11.07.2021 |
| 7 | 02,04,06 ನೇ ಸೆಮಿಸ್ಟರ್ ಥಿಯರಿ ಪರೀಕ್ಷೆಗಳು | ಪ್ರಾರಂಭ : 15.07.2021<br>ಮುಕ್ತಾಯ : 04.08.2021 |
| 8 | ಆಂತರಿಕ ಪರೀಕ್ಷೆ | ಪ್ರಥಮ : 06 ನೇ ವಾರದಲ್ಲಿ<br>ದ್ವಿತೀಯ : 10 ನೇ ವಾರದಲ್ಲಿ<br>ತೃತೀಯ: 14 ನೇ ವಾರದಲ್ಲಿ |
| 9 | ಆಂತರಿಕ ಪರೀಕ್ಷೆಯ ಅಂಕಗಳ ಪರಿಶೀಲನೆ/ಲೆಕ್ಕಾಚಾರ | 15 ನೇ ವಾರದಲ್ಲಿ |
| 10 | ಮಧ್ಯಂತರ ತರಗತಿಗಳ ಹಾಜರಾತಿ ಪರಿಶೀಲನೆ ಮತ್ತು ವಿದ್ಯಾರ್ಥಿಗಳಿಗೆ/ಪೋಷಕರುಗಳಿಗೆ ಹಾಜರಾತಿ ಬಗ್ಗೆ ಸಾಂತ್ವನ ನೀಡುವುದು | 08 ನೇ ವಾರದಲ್ಲಿ |

ಪರೀಕ್ಷೆಗಳನ್ನು ಚಾಲ್ತಿಯಲ್ಲಿರುವ ಮಾರ್ಗಸೂಚಿಗಳನ್ವಯ ಮತ್ತು COVID-19 Pandemic ಹಿನ್ನಲೆಯಲ್ಲಿ ಕರೋನಾ ಸಾಂಕ್ರಾಮಿಕ ಪಿಡುಗು ನಿಯಂತ್ರಣ ಮತ್ತು ಹರಡುವಿಕೆಯನ್ನು ತಡೆಗಟ್ಟುವಲ್ಲಿ ಅನುಸರಿಸಬೇಕಾದ ಮುನ್ನಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಪರೀಕ್ಷಾ ಗೌಪ್ಯತೆ ಮತ್ತು ಪಾವಿತ್ರತ್ಯೆಯನ್ನು ಗಮನದಲ್ಲಿರಿಸಿಕೊಂಡು, ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಹಾಗೂ ಮೇಲಿನ ಮಾನದಂಡಗಳನ್ನು ಅನುಸರಿಸುವ ಬಗ್ಗೆ ಎಲ್ಲಾ ಬೋಧಕ ವರ್ಗದವರಿಗೆ ತಿಳುವಳಿಕೆ ನೀಡಿ, ಕ್ರಮ ಜರುಗಿಸಲು ಸೂಚಿಸಲಾಗಿದೆ.

ಮುಂದುವರೆದು, ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ಮೇಲ್ಕಂಡ ಎಲ್ಲಾ ವಿಷಯಗಳನ್ನು ವಿದ್ಯಾರ್ಥಿಗಳು/ಪೋಷಕರು/ಉಪನ್ಯಾಸಕರು/ಸಿಬ್ಬಂದಿ ವರ್ಗದವರ ಗಮನಕ್ಕೆ ತಂದು ಅಗತ್ಯ ಪೂರ್ವಸಿದ್ಧತೆಗಳನ್ನು ಸಂಸ್ಥೆಗಳಲ್ಲಿ ಕೈಗೊಳ್ಳಲು ತಿಳಿಸಲಾಗಿದೆ.

ಆಯುಕ್ತರು

ಇವರಿಗೆ: ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ – ಮಾಹಿತಿಗಾಗಿ ಮತ್ತು ಮುಂದಿನ ಅಗತ್ಯ ಕ್ರಮಕ್ಕಾಗಿ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ

ಪ್ರತಿ : 1. ಆಯುಕ್ತರ ಆಪ್ತಶಾಖೆ – ಮಾಹಿತಿಗಾಗಿ
2.ನಿರ್ದೇಶಕರ ಆಪ್ತಶಾಖೆ – ಮಾಹಿತಿಗಾಗಿ
3.ಇ-ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
4. ಕಾರ್ಯದರ್ಶಿಯವರ ಆಪ್ತಶಾಖೆ- ಮಾಹಿತಿಗಾಗಿ
5.ಕಡತಕ್ಕೆ